ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

5

ಇಲಾಖೆ / ವಿಷಯ : DEPARTMENT / SUBJECT: ಶಿಕ್ಷಣ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 23/10/2020

**ಈಗ ರಾಜ್ಯ ಸರ್ಕಾರ ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿಯುಸಿ ಪಠ್ಯಕ್ರಮವನ್ನು ಶೇ.30 ಕಡಿತ ಮಾಡಿ ಆದೇಶ ಹೊರಡಿಸಿದೆ. ಆದರೆ, ಪ್ರೌಢಶಿಕ್ಷಣ ಮಂಡಳಿಯಲ್ಲಿ ಪಠ್ಯಕ್ರಮವೇ ಕಡಿತವಾಗಿಲ್ಲ. ಪುನರಾವಲೋಕನ ತರಗತಿಗಳು ಮತ್ತು ಪೂರ್ವ ಸಿದ್ಧತಾ ಪರೀಕ್ಷೆಯ ಸಾಧ್ಯತೆಯೂ ಕ್ಷೀಣಿಸುತ್ತಿದೆ. ಇನ್ನು ಪರೀಕ್ಷೆಗೆ ಸಿದ್ಧವಾಗುವುದು ಹೇಗೆ ಎಂಬ ಮಾತು ಕೇಳಿಬರುತ್ತಿದೆ.**

# ಪಿಯುಸಿ ಮಾತ್ರವೇ?

ಉವಾ 23/10/20

## ಪೋಷಕರು, ಶಿಕ್ಷಕರಿಂದ ಶಿಕ್ಷಣ ಇಲಾಖೆಗೆ ಪ್ರಶ್ನಾವಳಿ




ಸಾಂದರ್ಭಿಕ ಚಿತ್ರ



**ಬೆಂಗಳೂರು/ಮಣಿಪಾಲ:** ಕೊರೊನಾ ಹಿನ್ನೆಲೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆ ವಿದ್ಯಾರ್ಥಿಗಳ ಮೇಲಿನ ಹೊರೆ ತಗ್ಗಿಸಲು 2020-21ನೇ ಶೈಕ್ಷಣಿಕ ಸಾಲಿನ ಪಠ್ಯವನ್ನು ಶೇ.30 ಕಡಿತಗೊಳಿಸಿ ಆದೇಶ ಹೊರಡಿಸಿದೆ. ಇದರ ಬೆನ್ನಲ್ಲೇ ಲಭ್ಯವಿರುವ ಅವಧಿಯಲ್ಲಿ ಉಳಿದ ಶೇ. 70ರಷ್ಟು ಪಠ್ಯ ಬೋಧನೆ ಪೂರ್ಣಗೊಳಿಸುವ ಸವಾಲು ಎದುರಾಗಿದೆ.

ಲೆಕ್ಕದ ಪ್ರಕಾರ, ಈಗಾಗಲೇ ಶೇ. 50 ಪಠ್ಯ ಬೋಧನೆ ಪೂರ್ಣಗೊಳ್ಳಬೇಕಿತ್ತು. ಆದರೆ, ಕೊರೊನಾ ಹಾವಳಿಯಿಂದ ಆಗಿಲ್ಲ. ಉಳಿದಿರುವುದು ನಾಲ್ಕು ತಿಂಗಳು ಮಾತ್ರ. ಈ ಪೈಕಿ ಕೊನೆಯ ಎರಡು ತಿಂಗಳು ಪುನರಾವರ್ತನೆ ಕಾರ್ಯಕ್ರಮಕ್ಕೆ ಮೀಸಲಿರುತ್ತದೆ. ಅಂದರೆ ಲಭ್ಯವಿರುವ ಎರಡರಿಂದ ಮೂರು ತಿಂಗಳಲ್ಲಿ ಶೇ. 70ರಷ್ಟು ಪಠ್ಯವಸ್ತುವನ್ನು ಪೂರ್ಣಗೊಳಿಸುವ ಸವಾಲು ಶಿಕ್ಷಕರ ಮುಂದಿದೆ.

**ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾತು ಬಿಡಿ; ಪಠ್ಯಕ್ರಮವೇ ಬಂದಿಲ್ಲ!:** ಈ ಶೈಕ್ಷಣಿಕ ವರ್ಷ ಮುಗಿಯಲು ಇರುವುದು ಕೇವಲ ಆರು ತಿಂಗಳು. ಆದರೂ ಎಸ್ಸೆಸ್ಸೆಲ್ಸಿ ಪಠ್ಯಕ್ರಮವೂ ಪ್ರಕಟವಾಗಿಲ್ಲ, ಅಷ್ಟೇ ಅಲ್ಲ; ಯಾವುದು, ಎಷ್ಟು ಎಂಬ ಯಾವ ಸ್ಪಷ್ಟತೆಯೂ ಇಲ್ಲ. ಹೀಗಿದ್ದರೆ ವಿದ್ಯಾರ್ಥಿಗಳು ಸಿದ್ಧವಾಗುವುದು ಹೇಗೆ? ಶಿಕ್ಷಕರು ಪಾಠ ಮಾಡುವುದು ಹೇಗೆ? ಈ ಪ್ರಶ್ನೆಗಳೇ ಈಗ ರಾಜ್ಯಾದ್ಯಂತ ಸಾರ್ವತ್ರಿಕಗೊಂಡಿದೆ. ಗುರುವಾರ ಪಿಯುಸಿ ಪಠ್ಯಕ್ರಮ ಬಿಡುಗಡೆಯಾದ ಮೇಲಂತೂ ಎಸ್ಸೆಸ್ಸೆಲ್ಸಿ ಪಠ್ಯಕ್ರಮ ನೀಡಲು ಇನ್ನೆಷ್ಟು ದಿನ ಬೇಕು, ಯಾವಾಗ ಪ್ರಕಟಗೊಳ್ಳುತ್ತದೆ ಎಂಬ ಪ್ರಶ್ನೆಗಳು ವಿದ್ಯಾರ್ಥಿಗಳು, ಹೆತ್ತವರು ಮತ್ತು ಶಿಕ್ಷಕ ವಲಯದಲ್ಲಿ ಹೆಚ್ಚಾಗಿದೆ.

ಪ್ರತೀ ವಾರ್ಷಿಕ ಶೈಕ್ಷಣಿಕ ಕ್ಯಾಲೆಂಡರ್‌ನ ಪ್ರಕಾರ ಮುಂದಿನ ಏಪ್ರಿಲ್‌ಗೆ ಶೈಕ್ಷಣಿಕ ವರ್ಷ ಪೂರ್ಣಗೊಳ್ಳಬೇಕು. ಅದಕ್ಕೆ ಇರುವುದು ಕೇವಲ ಆರು ತಿಂಗಳು. ಇದರಲ್ಲಿ ಪಠ್ಯಕ್ರಮಕ್ಕೆ ಸಿಗುವುದು ಅಲ್ಪಾವಧಿ ಮಾತ್ರ. ಆದರೂ ಸಾರ್ವಜನಿಕ ಶಿಕ್ಷಣ ಇಲಾಖೆ ಪಠ್ಯಕ್ರಮ ಬಿಡುಗಡೆಗೆ ವಿಳಂಬ ಮಾಡುತ್ತಿರುವುದೇಕೆ ಎಂಬ ಪ್ರಶ್ನೆ ಎದುರಾಗಿದೆ.

**ಬರೀ ಗೊಂದಲ:** ಈ ಶೈಕ್ಷಣಿಕ ವರ್ಷದ ಆರಂಭದಿಂದಲೇ ಗೊಂದಲ. ಕೊರೊನಾ ಹಿನ್ನೆಲೆಯಲ್ಲಿ ಶಾಲೆ ಆರಂಭಿಸಬೇಕೋ, ಬೇಡವೋ ಎಂಬ ಗೊಂದಲದಿಂದ ಆರಂಭವಾಗಿ, ಬಳಿಕ ಪಠ್ಯಕ್ರಮ ಕಡಿತ ಬೇಕೋ- ಬೇಡವೋ ಎಂಬ ಗೊಂದಲ. ಅನಂತರ ವಿದ್ಯಾಗಮದ್ದು. ಇದರ ಮಧ್ಯೆ, ಶೇ.30 ಪಠ್ಯಕ್ರಮ ಕಡಿತವೆಂದು ನಿರ್ಧರಿಸಿ, ಜಾರಿಗೊಳ್ಳುವಷ್ಟರಲ್ಲಿ ಇಲಾಖೆ ದಿಢೀರನೆ ತಡೆ ನೀಡಿತು. ▶ 8ನೇ ಪುಟಕ್ಕೆ

## ವಿದ್ಯಾರ್ಥಿಗಳ ಪ್ರಶ್ನೆಪತ್ರಿಕೆ

1. ಪಿಯುಸಿಯ ಶೇ.70 ಪಠ್ಯಕ್ರಮ ಮುಗಿಯುವುದು ಯಾವಾಗ?
2. ಮಧ್ಯಂತರ ಪರೀಕ್ಷೆ ಯಾವಾಗ?
3. ಪುನರವಲೋಕನ ತರಗತಿಗಳು ಯಾವಾಗ ನಡೆಯಲಿವೆ?
4. ಪ್ರಸಕ್ತ ಸಾಲಿನ ಪ್ರಮುಖ ಪರೀಕ್ಷೆ ಯಾವಾಗ ನಡೆಯಲಿದೆ?
5. ಈ ಶೈಕ್ಷಣಿಕ ವರ್ಷ ಯಾವಾಗ ಮುಗಿಯುತ್ತದೆ?
6. ಎಸ್ಸೆಸ್ಸೆಲ್ಸಿ ಪಠ್ಯ ಕಡಿತ ನಿರ್ಧಾರ ಯಾವಾಗ?
7. ವಿಳಂಬದಿಂದ ವಿದ್ಯಾರ್ಥಿ, ಶಿಕ್ಷಣ ಸಮುದಾಯದಲ್ಲಿ ಗೊಂದಲ ಉಂಟಾಗುವುದಿಲ್ಲವೇ?

## ಪರೀಕ್ಷಾ ಮಂಡಳಿ ಮೌನ

ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಗೆ ಪೂರ್ವಸಿದ್ಧತೆಯನ್ನು ಮಾಡಿಕೊಂಡು ವಿದ್ಯಾರ್ಥಿಗಳ ಆತಂಕವನ್ನು ದೂರ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಬೇಕಿದ್ದ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಇನ್ನೂ ಮೌನ ವಹಿಸಿದೆ. ಸ್ಥಳೀಯ ಘಟಕಗಳ ಜತೆಗೆ ಚರ್ಚಿಸಿ ನೀಲನಕ್ಷೆಯನ್ನು ಸಿದ್ಧಪಡಿಸಬೇಕಿದ್ದ ಮಂಡಳಿಯು ಕನಿಷ್ಠ ಸಿದ್ಧತೆಯನ್ನೂ ಮಾಡಿಕೊಂಡಿಲ್ಲ ಎಂಬುದು ಇನ್ನಷ್ಟು ಆತಂಕಕ್ಕೆ ಕಾರಣವಾಗಿದೆ.

## ಅನ್ಯರಾಜ್ಯಗಳ ಮೊರೆ

ಎಸ್ಸೆಸ್ಸೆಲ್ಸಿವರೆಗಿನ ಪಠ್ಯ ಪರಿಷ್ಕರಣೆ ಸಂಬಂಧ ವಿವಿಧ ರಾಜ್ಯಗಳ ಅಭಿಪ್ರಾಯ ಸಂಗ್ರಹಕ್ಕೆ ಶಿಕ್ಷಣ ಇಲಾಖೆ ಮುಂದಾಗಿದೆ. ಸರ್ಕಾರ ಉತ್ತರ ಪ್ರದೇಶ, ರಾಜಸ್ಥಾನ, ತೆಲಂಗಾಣ, ತಮಿಳುನಾಡು, ಪುದುಚೇರಿ, ಗುಜರಾತ್ ಸೇರಿದಂತೆ 15ಕ್ಕೂ ಅಧಿಕ ರಾಜ್ಯಗಳಿಂದ ಮಾಹಿತಿ ಸಂಗ್ರಹಿಸಿದೆ. ಬಹುತೇಕ ಎಲ್ಲ ರಾಜ್ಯಗಳಲ್ಲೂ ಪಠ್ಯಕಡಿತದ ನಿರ್ಧಾರ ಮಾಡಲಾಗಿದೆ. ಈ ಆಧಾರದಲ್ಲಿ ರಾಜ್ಯದಲ್ಲಿ ಪಠ್ಯ ಕಡಿತದ ನಿರ್ಧಾರ ಮಾಡಿದ್ದು ಈ ಸಂಬಂಧ ಶೀಘ್ರ ಆದೇಶ ಹೊರಬೀಳುವ ಸಾಧ್ಯತೆ ಇದೆ.

> ಪಠ್ಯಕ್ರಮದ ಕಡಿತಕ್ಕೆ ಈಗಾಗಲೇ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಪಠ್ಯಕ್ರಮ ಕಡಿತದ ಕುರಿತಂತೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.
>
> • ಸುರೇಶ್‌ಕುಮಾರ್, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ

> ಈ ಹಿಂದೆ ಶೇ.50ರಷ್ಟು ಪಠ್ಯ ವಸ್ತು ಕಡಿತಕ್ಕೆ ಮನವಿ ಮಾಡಿದ್ದೆವು. ರಾಜ್ಯ ಸರ್ಕಾರ ಶೇ.30 ರಷ್ಟು ಪಠ್ಯ ವಸ್ತು ಕಡಿತ ಮಾಡಿರುವುದನ್ನು ಸ್ವಾಗತಿಸುತ್ತೇನೆ.
>
> • ಎ.ಎಚ್.ನಿಂಗೇಗೌಡ, ರಾಜ್ಯ ಪಿಯು ಉಪನ್ಯಾಸಕರ ಸಂಘದ ಅಧ್ಯಕ್ಷ

# ಪಿಯುಸಿ ಮಾತ್ರವೇ?

**1ನೇ ಪುಟದಿಂದ ▶** ಜುಲೈ ಮಾಸಾಂತ್ಯದಲ್ಲಿ ಆದೇಶವನ್ನು ವಾಪಸು ಪಡೆದಿದ್ದು, ಮೂರು ತಿಂಗಳಾದರೂ ಪಠ್ಯಕ್ರಮದ ಕುರಿತು ಹೊಸ ಆದೇಶ ಅಥವಾ ಸೂಚನೆ ಶಿಕ್ಷಕರಿಗೆ ತಲುಪಿಲ್ಲ. ಹಾಗಾಗಿ ಪಠ್ಯ ಕಡಿತವಿದೆಯೇ ಇಲ್ಲವೇ ಎಂಬ ಗೊಂದಲ ಹಾಗೆಯೇ ಮುಂದುವರಿದಿದೆ.

**ಪಠ್ಯ ಕಡಿತ; ಯಾರಿಗೆ ನಷ್ಟ?:** ಅತಿಯಾದ ಪಠ್ಯಕ್ರಮ ಕಡಿತದಿಂದ ವಿದ್ಯಾರ್ಥಿಗಳಿಗೆ ಲಾಭಕ್ಕಿಂತ ನಷ್ಟವೇ ಹೆಚ್ಚು. ಭಾಷಾ ವಿಷಯ, ಸಮಾಜ ವಿಜಾನದಲ್ಲಿ ಸ್ವಲ್ಪ ಕಡಿತವಾದರೂ ಹೊಂದಿಸಿಕೊಳ್ಳಬಹುದು. ಆದರೆ ಗಣಿತ ಮತ್ತು ವಿಜ್ಞಾನ ಪರಿಕಲ್ಪನೆ ಆಧರಿತವಾದುದು. ಒಂದು ವೇಳೆ ಹಾಗೆ ಪೂರ್ಣ ತೆಗೆದರೆ ಪ್ರಥಮ ಪಿಯುಸಿಯಲ್ಲಿ ಬಹಳ ಕಷ್ಟ ಪಡಬೇಕಾಗುತ್ತದೆ. ಹಿಂದೆ ಸ್ಪೈರಲ್ ಅಪ್ರೋಚ್ (ಒಂದು ವಿಷಯವನ್ನು ಎಂಟು, ಒಂಬತ್ತು ಮತ್ತು ಎಸ್ಸೆಲ್ಸಿಯಲ್ಲಿ ವಿವಿಧ ಹಂತಗಳಲ್ಲಿ ಕಲಿಯುವುದು) ಬೋಧನ ಕ್ರಮವಿತ್ತು. ಆಗ ಮೂಲ ಪರಿಕಲ್ಪನೆಗಳನ್ನು ತಿಳಿದುಕೊಳ್ಳಲು ಸಮಸ್ಯೆಯಾಗುತ್ತಿರಲಿಲ್ಲ. ಆದರೆ ಈಗಿನ ಪದ್ಧತಿ ಅದಕ್ಕೆ ವಿರುದ್ಧವಾಗಿದೆ. ಹಾಗಾಗಿ ವಿದ್ಯಾರ್ಥಿಗೆ ಹೆಚ್ಚು ನಷ್ಟವಾಗುವ ಸಂಭವವಿದೆ ಎಂಬುದು ಪೋಷಕರ ಅಭಿಪ್ರಾಯ.

**ಎಲ್ಲೆಡೆಯೂ ಪರಿಷ್ಕರಣೆ ಕೂಗು:** ಪದವಿಪೂರ್ವ ಶಿಕ್ಷಣದ ಪಠ್ಯವಸ್ತು ಕಡಿತಗೊಳಿಸಿದ ಬೆನ್ನಲ್ಲೇ ನಂತರದ ಪಠ್ಯಗಳ ಪರಿಷ್ಕರಣೆ ಬಗ್ಗೆ ಕೂಗು ಕೇಳಿಬರುತ್ತಿದೆ. ಪಿಯುಸಿಯಲ್ಲಿರುವ ಪಠ್ಯವನ್ನು ಆಧರಿಸಿಯೇ ಹಲವು ತಾಂತ್ರಿಕ ಕೋರ್ಸ್‌ಗಳು ಮತ್ತು ಪದವಿಯಲ್ಲಿ ಪಠ್ಯ ರಚನೆ ಆಗಿರುತ್ತದೆ. ಕಡಿತಗೊಂಡ ಪಠ್ಯದಿಂದ ವಿದ್ಯಾರ್ಥಿಗಳು ವಂಚಿತರಾದಾಗ, ನಂತರದ ಕೋರ್ಸ್‌ಗಳಲ್ಲಿ ಅದು ಹೊರೆ ಆಗಿ ಪರಿಗಣಿಸುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಅಲ್ಲಿಯೂ ಪರಿಷ್ಕರಣೆ ಮಾಡುವ ಅಗತ್ಯವಿದೆ ಎಂಬ ಅಭಿಪ್ರಾಯ ಕೆಲ ಉಪನ್ಯಾಸಕರಿಂದ ವ್ಯಕ್ತವಾಗಿದೆ.

---

**ಪಠ್ಯ ಪ್ರಮಾಣ ಕಡಿಮೆ ಆಗಿರುವುದು ಸದ್ಯ ಓದಿನ ಹೊರೆಯನ್ನು ತಪ್ಪಿಸಿದೆ. ಆದರೆ, ಭವಿಷ್ಯದಲ್ಲಿ ಈ ವಿಷಯಗಳ ಕುರಿತು ಹೆಚ್ಚಿನ ಓದಿಗೆ ಮುಂದಾದಾಗ ಸಾಮಾನ್ಯ ಮಾಹಿತಿಯು ಇಲ್ಲದೆ ತೊಂದರೆಯಾಗಬಹುದು.**

• ಎಸ್, ಪವನ್‌ಕುಮಾರ್ ಶೆಟ್ಟಿ
ಕೆಎಲ್‌ಇ ಸ್ವಾತಂತ್ರ್ಯ ಪದವಿ ಪೂರ್ವ ಕಾಲೇಜು, ನಾಗರಬಾವಿ.

---

**ಮೂರ್ನಾಲ್ಕು ತಿಂಗಳಲ್ಲಿ ಎಲ್ಲಾ ಪಠ್ಯವನ್ನು ಪೂರ್ಣ ಪ್ರಮಾಣದಲ್ಲಿ ಬೋಧಿಸಲು ಸಾಧ್ಯವಾಗುತ್ತಿರಲಿಲ್ಲ. ಪಠ್ಯ ಪ್ರಮಾಣ ಕಡಿಮೆ ಮಾಡಿರುವುದು ಅನುಕೂಲವಾಗಿದೆ.**

• ಬಿ.ರೇಣುಕಾ, ಸರ್ಕಾರಿ ಪದವಿ ಪೂರ್ವ ಕಾಲೇಜು ವರ್ತೂರು.

---

**ಪಠ್ಯಪ್ರಮಾಣ ಇಳಿಕೆಯಾಗಿರುವುದು ಅನುಕೂಲವಾಗಿದೆ. ಶೀಘ್ರ, ಕಾಲೇಜು ಆರಂಭವಾಗಿ ಇರುವ ಪಠ್ಯವನ್ನು ಬೇಗ ಮುಗಿಸಬೇಕು.**

• ಪಾವನಿ, ಸರ್ಕಾರಿ ಪಪೂ ಕಾಲೇಜು ವರ್ತೂರು.